# ಮಳೆಯ ಆಟ



ಸುರಿದರೆ ಭಾರಿ ಮಳೆ
ಮಸ್ತ್ ಮೋಜು ನನಗೆ
ನಡೆದೆ ನಾನು ಕೂಡಲೆ
ಆಡಲೆಂದು ರಸ್ತೆಗೆ!

ರಾಮು ಸೋಮು ನೀತು
ಗೌರಿ
ಈ ಎಲ್ಲ ಗೆಳೆಯರು
ನನ್ನ ಜತೆ ಆಡಲೆಂದು
ಹೊರಗೆ ಓಡಿ ಬರುವರು

ರಸ್ತೆ ತುಂಬ ನೀರೆ ನೀರು
ಹಾದಿ ಬೀದಿ ಕಾಣದು
ಕೈ ಕೈ ಹಿಡಿದು ನೀರಲ್ಲಿಳಿದು
ಆಡುವ ಗಮ್ಮತ್ತೇನದು!

ಸುರಿವ ಮಳೆ ಹನಿಗಳನ್ನ
ಹಿಡಿವ ತವಕ ನಮ್ಮದು
ಹರಿವ ನೀರ ತಡೆದು ಹಿಡಿದು
ಈಜುವಾಸೆ ಬರುವುದು

ಕಾಗದದಲ್ಲಿ ದೋಣಿ ಮಾಡಿ
ನೀರಿನಲ್ಲಿ ತೇಲಿ ಬಿಟ್ಟು
ಮತ್ತೆ ದೋಣಿ ಮಾಡಲೆಂದು
ಹುಡುಕುವೆವು ಕಾಗದ ರಟ್ಟು
ಮಳೆಯ ಆಟ ಬೇಡಿರಪ್ಪ
ಎಂದು ಅಮ್ಮ ಕರೆವಳು
ಚಳಿ ಜ್ವರ ಬರುವುದೆಂದು
ಅವಳು ಜೋರುಗರೆವಳು

ಒದೆ ಬಿದ್ದರೆಂದು ಹೆದರಿ
ನಾವು ಒಳ ನಡೆವೆವು
ಒದ್ದೆ ಬಟ್ಟೆ ಬಿಚ್ಚಿ ಬಿಟ್ಟು
ಹೊಸ ಬಟ್ಟೆ ತೊಡುವೆವು.

**-ಉಮೇಶ ವಾಮನ ಪ್ರಭು, ಬೆಂಗಳೂರು**

# ಬೀರಬಲ್ಲನ ಉಪಾಯ



ಅಕ್ಬರನ ರಾಜಧಾನಿಯಲ್ಲಿ ಹತ್ತಿ ವ್ಯಾಪಾರಿಯೊಬ್ಬನಿದ್ದನು. ಅವನು ಹತ್ತಿ ವ್ಯಾಪಾರ ಮಾಡಿ ಜೀವನ ಸಾಗಿಸುತ್ತಿದ್ದನು. ಅವನ ಬಳಿ ಒಂದು ದೊಡ್ಡದಾದ ಹತ್ತಿ ಸಂಗ್ರಹಿಸುವ ಮನೆಯಿತ್ತು. ಪ್ರತಿದಿನವೂ ಆ ಮನೆಯಿಂದ ಹತ್ತಿ ಕಳುವಾಗುತ್ತಿತ್ತು. ಅವನ ಕೈಕೆಳಗೆ ಹತ್ತಾರು ಜನ ಕೆಲಸ ಮಾಡುತ್ತಿದ್ದರು. ಅವರನ್ನು ಕೇಳಿದರೆ 'ನಾವು ಕದ್ದಿಲ್ಲ' ಎಂದೇ ಹೇಳುತ್ತಿದ್ದರು. ಏನು ಮಾಡಿದರೂ ಆ ವ್ಯಾಪಾರಿಗೆ ಹತ್ತಿ ಕದಿಯುವ ಕಳ್ಳರನ್ನು ಕಂಡು ಹಿಡಿಯಲು ಸಾಧ್ಯವಾಗಲೇ ಇಲ್ಲ. ನಿಸ್ಸಹಾಯಕನಾದ ಆ ವ್ಯಾಪಾರಿ ಮಾರನೆಯ ದಿನ ಬೀರಬಲ್ಲನ ಬಳಿಗೆ ಹೋಗಿ ತನ್ನ ಸಮಸ್ಯೆಯನ್ನು ಹೇಳಿಕೊಂಡ. ಒಂದು ಕ್ಷಣ ಯೋಚಿಸಿದ ಬೀರಬಲ್ಲ ಅವನಿಗೆ 'ನೀನು ಒಂದು ಕೆಲಸ ಮಾಡು! ನಿನ್ನ ಕೆಲಸದವರನ್ನೆಲ್ಲ ನಾಳೆ ಬೆಳಿಗ್ಗೆ ಉಪಾಹಾರಕ್ಕೆ ನನ್ನ ಮನೆಗೆ ಕರೆದುಕೊಂಡು ಬಾ' ಎಂದು ಹೇಳಿದ.

ಮರುದಿನ ವ್ಯಾಪಾರಿಯು ಬೀರಬಲ್ಲ ಹೇಳಿದಂತೆ ತನ್ನ ಕೆಲಸಗಾರರನ್ನೆಲ್ಲ ಅವನ ಮನೆಗೆ ಕರೆದುಕೊಂಡು ಹೋದ. ಅವರನ್ನು ಪ್ರೀತಿಯಿಂದ ಸ್ವಾಗತಿಸಿದ ಬೀರಬಲ್ಲ 'ನಿಮ್ಮಲ್ಲಿ ನಿಮ್ಮ ಯಜಮಾನರ ಮನೆಯಿಂದ ಹತ್ತಿಯನ್ನು ಕದಿಯುತ್ತಿರುವವರು ಯಾರು?' ಎಂದು ಪ್ರಶ್ನಿಸಿದ. ಅವರೆಲ್ಲ 'ಅಯ್ಯೋ ನಾವ್ಯಾರೂ ಹತ್ತಿಯನ್ನು ಕದ್ದೇ ಇಲ್ಲ' ಎಂದು ಒಕ್ಕೊರಲಿನಿಂದ ಹೇಳಿದರು.  ಬೀರಬಲ್ಲ ನಸು ನಗುತ್ತ 'ಅರೆ ಹೌದಾ? ಮತ್ತೆ ಇಲ್ಲಿಗೆ ಬರುವ ಮೊದಲು ನಿಮ್ಮ ಮೀಸೆಗೆ ಅಂಟಿಕೊಂಡಿರುವ ಹತ್ತಿಯನ್ನು ತೆಗೆದು ಬಿಸಾಕದೆ ಹಾಗೇ ಬಂದಿದ್ದೀರಲ್ಲ' ಎಂದ. ಕೂಡಲೇ ಇಬ್ಬರು ಕೆಲಸಗಾರರು ತಮ್ಮ ಮೀಸೆಗಳನ್ನು ಮುಟ್ಟಿ ನೋಡಿಕೊಂಡರು. ಬೀರಬಲ್ಲ ಅವರಿಬ್ಬರನ್ನು ಹಿಡಿದುಕೊಂಡು ಆ ವ್ಯಾಪಾರಿಗೆ 'ಇಷ್ಟು ದಿನ ಹತ್ತಿಯನ್ನು ಕದಿಯುತ್ತಿದ್ದವರು ಇವರೇ' ಎಂದವನೇ ಕಳ್ಳರಿಗೆ 'ನೀವು ಕದ್ದಿರುವ ಹತ್ತಿಯನ್ನು ನಿಮ್ಮ ಯಜಮಾನನಿಗೆ ಹಿಂತಿರುಗಿಸಿ ಬಿಡಿ' ಎಂದು ತಾಕೀತು ಮಾಡಿದ.

ವ್ಯಾಪಾರಿ ಆ ಇಬ್ಬರು ಕೆಲಸಗಾರರನ್ನು ಕೆಲಸದಿಂದ ವಜಾ ಮಾಡಿ ಬೀರಬಲ್ಲನಿಗೆ ಕೃತಜ್ಞತೆ ಸಲ್ಲಿಸಿದ.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**